# ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976

(ಕರ್ನಾಟಕ ರಾಜ್ಯಪತ್ರ, ಗುರುವಾರ ನವಂಬರ್ 25, 2004 ಭಾಗ-4ಎ ಪುಟ 466 ರಿಂದ 473ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ನ್ಯಾಯಾಧಿಕರಣದ ರಚನೆ
4. ನ್ಯಾಯಾಧಿಕರಣದ ಪ್ರಧಾನ ಸ್ಥಾನ
5. ನ್ಯಾಯಾಧಿಕರಣದ ಅಧಿಕಾರಗಳು
6. ನ್ಯಾಯಾಧಿಕರಣದ ವ್ಯವಹಾರ ನಡವಳಿಕೆ
7. ಪೂರ್ಣ ನ್ಯಾಯಪೀಠಕ್ಕೆ ಒಪ್ಪಿಸುವುದು
8. ಪುನರವಲೋಕನದ ಅಧಿಕಾರ

8ಎ. ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ

9. ನ್ಯಾಯಾಧಿಕರಣದ ಆದೇಶಗಳ ಅಂತಿಮತೆ
10. ವಿವರಪಟ್ಟಿಕೆಗಳನ್ನು ತರಿಸಿಕೊಳ್ಳಲು ನ್ಯಾಯಾಧಿಕರಣದ ಅಧಿಕಾರಗಳು, ಇತ್ಯಾದಿ
11. ನ್ಯಾಯಾಧಿಕರಣದ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕುದು

11ಎ. ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕುದು

12. ರಾಜ್ಯಪ್ರತಿನಿಧಿ
13. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಸಂರಕ್ಷಣೆ
14. ನಿಯಮ ರಚನಾಧಿಕಾರ
15. ವಿನಿಯಮಗಳನ್ನು ರಚಿಸುವ ಅಧಿಕಾರ
16. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ
17. 1975ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 22 ಮತ್ತು 27 ಇವುಗಳ ನಿರಸನ


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1976ರ ಅಧಿನಿಯಮ 10.–** ಕರ್ನಾಟಕ ಮಾರಾಟ ತೆರಿಗೆ ಅಪೀಲು ನ್ಯಾಯಾಧಿಕರಣ, ಕರ್ನಾಟಕ ಸಹಕಾರಿ ಅಪೀಲು ನ್ಯಾಯಾಧಿಕರಣ ಮತ್ತು ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣ – ಇವು ಸಂಬಂಧಿಸಿದ ಅಧಿನಿಯಮಗಳ ಮೇರೆಗೆ ರಚನೆಗೊಂಡಿದ್ದು ಪ್ರತ್ಯೇಕ ನ್ಯಾಯಾಧಿಕರಣಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಈ ನ್ಯಾಯಾಧಿಕರಣಗಳು, ಸಂಬಂಧಪಟ್ಟ ಅಧಿನಿಯಮಿತಿಗಳ ಮೂಲಕ ಅವುಗಳಿಗೆ ಪ್ರದತ್ತವಾದಂಥ ಅಪೀಲು ಮತ್ತು ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸುತ್ತಿದ್ದವು. ಈ ನ್ಯಾಯಾಧಿಕರಣಗಳು ಒಂದೊಂದೂ ಸ್ವತಂತ್ರವಾಗಿದ್ದುದರಿಂದ ಮತ್ತು ಅವುಗಳಿಗೆ ಒಂದು ಸಾಮಾನ್ಯ

ಸಮನ್ವಯ ನಿಕಾಯವಿಲ್ಲದಿದ್ದುದರಿಂದ, ಈ ನ್ಯಾಯಾಧಿಕರಣಗಳ ಮುಂದೆ ಆಗಾಗ್ಗೆ ಬರುವ ಸಾಮಾನ್ಯ ಕಾನೂನಿನ ಪ್ರಶ್ನೆಗಳು ಮತ್ತು ಅರ್ಥ ವಿವರಣೆಯ ಮೇಲಿನ ಅವುಗಳು ಕೈಕೊಂಡ ತೀರ್ಮಾನಗಳು ಏಕರೂಪವಾಗಿರಲಿಲ್ಲ. ಪರಿಣಾಮವಾಗಿ, ಬಹಳಷ್ಟು ಗೊಂದಲಕ್ಕೂ ಮತ್ತು ನಿವಾರಿಸಬಹುದಾಗಿದ್ದ ವ್ಯಾಜ್ಯಗಳಿಗೂ ಅವಕಾಶವಾಗುತ್ತಿತ್ತು.

ಮೇಲೆ ಹೇಳಿದ ಅಧಿನಿಯಮಿತಿಗಳ ಅಡಿಯಲ್ಲಿ ಉದ್ಭವವಾಗುವ ವಿಷಯಗಳನ್ನು ನಿಭಾಯಿಸುವ ಸಲುವಾಗಿ ಒಂದೇ ನ್ಯಾಯಾಧಿಕರಣವನ್ನು ಸ್ಥಾಪಿಸುವ ಪ್ರಶ್ನೆ ಕೆಲವು ಕಾಲದಿಂದ ಸರ್ಕಾರದ ತೀವ್ರ ಪರಿಶೀಲನೆಯಲ್ಲಿತ್ತು. ಅಂಥ ಸಾಮಾನ್ಯ ನ್ಯಾಯಾಧಿಕರಣವು, ತೀರ್ಮಾನಗಳಲ್ಲಿ ಏಕರೂಪತೆ ಕೊಡುವುದಷ್ಟೇ ಅಲ್ಲದೆ, ಮುಂದಿನ ಪ್ರಕರಣಗಳಿಗೆ ಸಹಾಯವಾಗುವಂತೆ ಪೂರ್ವ ನಿದರ್ಶನಗಳನ್ನು ರೂಪಿಸುವಲ್ಲಿಯೂ ಅನುಕೂಲ ಮಾಡಿಕೊಡುತ್ತದೆ. ಇದು ಎಲ್ಲರ ಅನುಕೂಲಕ್ಕಾಗಿ ಶೀಘ್ರ ವಿಲೇವಾರಿ ಮತ್ತು ಸರಿಯಾದ ತೀರ್ಮಾನಗಳಿಗೆ ಸಹಾಯಕವಾಗುತ್ತದೆ. ಅಲ್ಲದೆ, ಒಂದೇ ಸಾಮಾನ್ಯ ನ್ಯಾಯಾಧಿಕರಣದಿಂದ ಸಿಬ್ಬಂದಿ, ಇತ್ಯಾದಿಗಳ ಮೇಲಿನ ಖರ್ಚು ವೆಚ್ಚಗಳ ಮಿತವ್ಯಯ ಉಂಟಾಗುತ್ತದೆ.

ಈ ಪ್ರಶ್ನೆಯನ್ನು ಪರಿಶೀಲಿಸಿದ ತುಕೋಳ್ ವೇತನ ಆಯೋಗವು ಸಹ ಒಂದೇ ಸಾಮಾನ್ಯ ನ್ಯಾಯಾಧಿಕರಣ ರಚಿಸುವ ಬಗ್ಗೆ ಶಿಫಾರಸ್ಸು ಮಾಡಿತ್ತು. ಆದ್ದರಿಂದ, ಈ ಕೂಡಲೇ ಜಾರಿಗೆ ಬರುವಂತೆ ಒಂದೇ ಸಾಮಾನ್ಯ ಅಪೀಲು ನ್ಯಾಯಾಧಿಕರಣವನ್ನು ರಚಿಸಲು ನಿರ್ಧರಿಸಲಾಯಿತು.

ಸದರಿ ಉದ್ದೇಶಗಳನ್ನು ಈಡೇರಿಸಲು ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ ಭಾಗ IV 2ಎ, ದಿನಾಂಕ 22-1-1976ರ ಪುಟ 34 ರಲ್ಲಿ ಪ್ರಕಟಿಸಲಾಗಿದೆ).

**II**

**1976ರ ತಿದ್ದುಪಡಿ ಮಾಡುವ ಅಧಿನಿಯಮ 59.–** ವಾಣಿಜ್ಯ ತೆರಿಗೆಗಳು ಮತ್ತು ಸಹಕಾರ – ಈ ಇಲಾಖೆಗಳಿಗೆ ಸಂಬಂಧಿಸಿದ ಅಪೀಲುಗಳನ್ನು, ಜಿಲ್ಲಾ ನ್ಯಾಯಾಧೀಶರು ಸದಸ್ಯರಾಗಿರುವಂಥ ಮತ್ತು ಆ ಸಂದರ್ಭಕ್ಕಾಗಿ ಸಹಯೋಜಿಸಿಕೊಂಡ ಸಂಬಂಧಪಟ್ಟ ಇಲಾಖೆಯ ಒಬ್ಬ ಅಧಿಕಾರಿ ಇರುವ ನ್ಯಾಯಪೀಠವು ವಿಚಾರಣೆ ನಡೆಸುತ್ತಿತ್ತು. ಹಾಗೆಯೇ ವಾಣಿಜ್ಯ ತೆರಿಗೆಗಳ ಅಪೀಲುಗಳ ಪ್ರಕರಣಗಳಲ್ಲಿ ಅಧ್ಯಕ್ಷರು, ಲೆಕ್ಕಾಧಿಕಾರಿಯಾಗಿರುವಂಥ ಅಧಿಕಾರೇತರ ವ್ಯಕ್ತಿಯನ್ನು ಸಹ-ಸದಸ್ಯನನ್ನಾಗಿ ಸೇರಿಸಿಕೊಳ್ಳಬೇಕಾಗಿತ್ತು.

ಮೇಲ್ಕಂಡ ವ್ಯವಸ್ಥೆಯಲ್ಲಿ, ಸದಸ್ಯರುಗಳ ಪಟ್ಟಿಯನ್ನು ಪಡೆಯುವುದೂ ಮತ್ತು ಸಹಸದಸ್ಯರನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅಂಥ ಸಹಸದಸ್ಯರನ್ನು ಕೆಲಸವಿಲ್ಲದ ದಿನಗಳಲ್ಲಿ ಕೆಲಸವಿಲ್ಲದೆ ಇಟ್ಟುಕೊಳ್ಳುವಂಥ ವ್ಯಾವಹಾರಿಕ ಸಮಸ್ಯೆಗಳನ್ನೂ ಒಳಗೊಂಡಿತ್ತು.

ನ್ಯಾಯಾಧಿಕರಣ ಕಾರ್ಯಗಳ ಉತ್ತಮ ನಿರ್ವಹಣೆಗಾಗಿ ಸಹಸದಸ್ಯರನ್ನು ತೆಗೆದುಕೊಳ್ಳುವ ಬದಲಾಗಿ ಸಂಬಂಧಪಟ್ಟ ಇಲಾಖೆಗಳಿಂದ ಖಾಯಂ ಸದಸ್ಯರನ್ನು ತೆಗೆದುಕೊಳ್ಳುವುದು ಅವಶ್ಯವೆಂದು ಭಾವಿಸಲಾಗಿದೆ.

ವಾಣಿಜ್ಯ ತೆರಿಗೆ ವಿಷಯ ಸಂಬಂಧಪಟ್ಟಂತೆ ಈ ಹಿಂದಿನ ಮಾರಾಟ ತೆರಿಗೆ ಅಪೀಲು ನ್ಯಾಯಾಧಿಕರಣವು ನೀಡಿದ ತೀರ್ಮಾನದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣೆ ಅರ್ಜಿ ಸಲ್ಲಿಸಲು ಅವಕಾಶವಿತ್ತು. ಆದರೆ, ಇದನ್ನು ತೆಗೆದು ಹಾಕಲಾಯಿತು. ಆದರೂ, ಈ ವಿಷಯಗಳು ರಾಜ್ಯ ರಾಜಸ್ವದ ಬೃಹತ್ ಮೊತ್ತಗಳನ್ನು ಒಳಗೊಂಡಿರುವುದರಿಂದ, ನ್ಯಾಯಾಧಿಕರಣದ ತೀರ್ಪಿನ ವಿರುದ್ಧ

ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣೆ ಅರ್ಜಿ ಸಲ್ಲಿಸುವ ಅವಕಾಶವಿರುವುದು ಅವಶ್ಯವೆಂದು ಭಾವಿಸಲಾಯಿತು.

ಅಲ್ಲದೆ, ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಒಂದು ದಾವೆಯನ್ನು ಅಧಿವಿಚಾರಣೆ ಮಾಡುವಲ್ಲಿ ಸಿವಿಲ್ ನ್ಯಾಯಾಲಯವು ಹೊಂದಿರುವಂಥ ಕೆಲವು ಅಧಿಕಾರಗಳನ್ನು ಸಹ ಹೊಂದಿರತಕ್ಕುದೆಂದು ಅಭಿಪ್ರಾಯಪಡಲಾಯಿತು.

ವಾಣಿಜ್ಯ ತೆರಿಗೆಗಳಿಗೆ ಸಂಬಂಧಿಸಿದ ಅನೇಕ ವಿಷಯಗಳು ನ್ಯಾಯಾಧಿಕರಣದ ಮುಂದೆ ಬಾಕಿ ಇರುವುದರಿಂದ ಮೇಲೆ ಹೇಳಿದಂತೆ ಕೆಲವು ತಿದ್ದುಪಡಿಗಳನ್ನು ಮಾಡುವುದು ಅವಶ್ಯವಾಯಿತು. ಅವುಗಳನ್ನು ಅಧ್ಯಾದೇಶವನ್ನಾಗಿ ಹೊರಡಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಲಾಗಿದೆ. ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ **IV**– 2ಎ, ದಿನಾಂಕ 8–11–1976, ಪುಟ 7ರಲ್ಲಿ ಸಂಖ್ಯೆ 4418 ರಲ್ಲಿ ಪ್ರಕಟಿಸಲಾಗಿದೆ).

**III**

**1979ರ ತಿದ್ದುಪಡಿ ಮಾಡುವ ಅಧಿನಿಯಮ 8.–** ಕರ್ನಾಟಕ ಅಪೀಲು ನ್ಯಾಯಾಧಿಕರಣವು, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976ರ 3ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಅನುಸಾರವಾಗಿ, ಅಧ್ಯಕ್ಷರನ್ನು ಒಳಗೊಂಡಂತೆ 8ಕ್ಕಿಂತ ಕಡಿಮೆ ಇರದ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. (3)ನೇ ಉಪ ಪ್ರಕರಣಕ್ಕೆ ಅನುಸಾರವಾಗಿ, ಅಧ್ಯಕ್ಷನು ವಿಭಾಗಾಧಿಕಾರಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕುದು ಮತ್ತು ಉಳಿದ ಸದಸ್ಯರುಗಳಲ್ಲಿ ಕನಿಷ್ಠ ಪಕ್ಷ ಇಬ್ಬರು ಜಿಲ್ಲಾ ನ್ಯಾಯಾಧೀಶರಾಗಿರತಕ್ಕುದು, ಒಬ್ಬನು ವಾಣಿಜ್ಯ ತೆರಿಗೆಗಳ ಸದಸ್ಯನಾಗಿರತಕ್ಕದ್ದು ಮತ್ತೊಬ್ಬನು ಸಹಕಾರಿ ಸದಸ್ಯನಾಗಿರತಕ್ಕದ್ದು ಮತ್ತು ಉಳಿದವರು ಜಿಲ್ಲಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳಾಗಿರತಕ್ಕದ್ದು. ಒಬ್ಬನಿಗಿಂತ ಹೆಚ್ಚು ವಾಣಿಜ್ಯ ತೆರಿಗೆಗಳ ಸದಸ್ಯರನ್ನು ಮತ್ತು ಸಹಕಾರಿ ಸದಸ್ಯರನ್ನು ನೇಮಕ ಮಾಡಿಕೊಳ್ಳಲು ಸದರಿ ಪ್ರಕರಣವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ,

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ **IV** – 2ಎ, ದಿನಾಂಕ 22–2–1979ರ ಪುಟ 3ರಲ್ಲಿ ಸಂಖ್ಯೆ 110ರಲ್ಲಿ ಪ್ರಕಟಿಸಲಾಗಿದೆ.)

* * * *

# 1976ರ ಕರ್ನಾಟಕ ಅಧಿನಿಯಮ ಸಂಖ್ಯೆ 10

(1976ರ ಮಾರ್ಚ್ ಆರನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976

(1976ರ ಮಾರ್ಚ್ ನಾಲ್ಕನೇ ದಿವಸದಂದು ರಾಜ್ಯಪಾಲರ ಅನುಮತಿ ಪಡೆಯಿತು)

(1976ರ 59ನೇ ಮತ್ತು 1979ರ 8ನೇ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ)

**ಕರ್ನಾಟಕ ರಾಜ್ಯಕ್ಕಾಗಿ ಒಂದೇ ಅಪೀಲು ನ್ಯಾಯಾಧಿಕರಣವನ್ನು ರಚಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.**

ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಇವುಗಳ ಮೇರೆಗೆ ಸದರಿ ಅಧಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪ್ರತ್ಯೇಕ ಅಪೀಲು ನ್ಯಾಯಾಧಿಕರಣಗಳನ್ನು ರಚಿಸಲಾಗಿರುವುದರಿಂದ;

ಕರ್ನಾಟಕ ರಾಜ್ಯಕ್ಕಾಗಿ ಒಂದೇ ಅಪೀಲು ನ್ಯಾಯಾಧಿಕರಣವನ್ನು ಹೊಂದಲು ಮತ್ತು ಸದರಿ ನ್ಯಾಯಾಧಿಕರಣದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ಧರಿಸಲು ಮತ್ತು ಅದಕ್ಕೆ ಪ್ರಾಸಂಗಿಕವಾದ ಅಥವಾ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976 ಎಂದು ಕರೆಯತಕ್ಕುದು.

(2) ಅದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಅದು 1976ರ ಜನವರಿ ಮೊದಲನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) 'ಸದಸ್ಯ' ಎಂದರೆ ನ್ಯಾಯಾಧಿಕರಣದ ಸದಸ್ಯ;

(ಬಿ) 'ನ್ಯಾಯಾಧಿಕರಣ' ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಿದ ಕರ್ನಾಟಕ ಅಪೀಲು ನ್ಯಾಯಾಧಿಕರಣ.

**3. ನ್ಯಾಯಾಧಿಕರಣದ ರಚನೆ.-** (1) ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಕರ್ನಾಟಕ ರಾಜ್ಯಕ್ಕಾಗಿ ಕರ್ನಾಟಕ ಅಪೀಲು ನ್ಯಾಯಾಧಿಕರಣ ಎಂದು ಕರೆಯಲಾಗುವ ಅಪೀಲು ನ್ಯಾಯಾಧಿಕರಣವನ್ನು ರಚಿಸತಕ್ಕುದು.

(2) ನ್ಯಾಯಾಧಿಕರಣವು, ರಾಜ್ಯಸರ್ಕಾರವು ನೇಮಕ ಮಾಡಿದ ಅಧ್ಯಕ್ಷನೂ ಒಳಗೊಂಡಂತೆ [1][ಎಂಟು][1] ಸದಸ್ಯರಿಗಿಂತ ಕಡಿಮೆಯಲ್ಲದ ಸದಸ್ಯರನ್ನು ಒಳಗೊಂಡಿರತಕ್ಕುದು.

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಪ್ರತಿಯೋಜಿಸಲಾಗಿದೆ.

[1][(3) ಅಧ್ಯಕ್ಷನು ಡಿವಿಜನಲ್ ಕಮಿಷನರನ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯಾಗಿರತಕ್ಕುದು ಮತ್ತು ಉಳಿದ ಸದಸ್ಯರ ಪೈಕಿ ಕನಿಷ್ಠ ಪಕ್ಷ ಇಬ್ಬರು ಜಿಲ್ಲಾ ನ್ಯಾಯಾಧೀಶರಾಗಿರತಕ್ಕುದು, [2][ಕನಿಷ್ಠ ಪಕ್ಷ ಒಬ್ಬನು][2] ವಾಣಿಜ್ಯ ತೆರಿಗೆಗಳ ಡೆಪ್ಯುಟಿ ಕಮಿಷನರನ ದರ್ಜೆಗಿಂತ ಕಡಿಮೆಯಲ್ಲದ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಯಾಗತಕ್ಕುದು (ಇನ್ನು ಮುಂದೆ [2][ವಾಣಿಜ್ಯ ತೆರಿಗೆ ಸದಸ್ಯನೆಂದು][2] ಉಲ್ಲೇಖಿಸಲಾಗಿದೆ) [2][ಕನಿಷ್ಠ ಪಕ್ಷ ಒಬ್ಬನು][2] ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರನ ದರ್ಜೆಗಿಂತ ಕಡಿಮೆಯಲ್ಲದ ಸಹಕಾರ ಇಲಾಖೆಯ ಒಬ್ಬ ಅಧಿಕಾರಿ (ಇಲ್ಲಿ ಇನ್ನು ಮುಂದೆ [2][ಸಹಕಾರ ಸದಸ್ಯನೆಂದು][2] ಉಲ್ಲೇಖಿಸಲಾಗಿದೆ) ಮತ್ತು ಐಳಿದವರು ಆಡಳಿತ ಅನುಭವವುಳ್ಳ ಜಿಲ್ಲೆಯ ಡೆಪ್ಯುಟಿ ಕಮಿಷನರನ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಗಳಾಗಿರತಕ್ಕುದು.][1]

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಪ್ರತಿಯೋಜಿಸಲಾಗಿದೆ.

2. 1979ರ ಅಧಿನಿಯಮ ಸಂಖ್ಯೆ 8ರ ಮೂಲಕ 22.02.1979ರಿಂದ ಜಾರಿಗೆ ಬರುಂವತೆ ಪ್ರತಿಯೋಜಿಸಲಾಗಿದೆ.

(4) ನ್ಯಾಯಾಧಿಕರಣದ ವ್ಯವಹಾರದಲ್ಲಿನ ಯಾವುದೇ ಇಳಿತದ ಕಾರಣದಿಂದಾಗಿ ಅಥವಾ ಅನ್ಯಥಾ, ನ್ಯಾಯಾಧಿಕರಣದ ಸದಸ್ಯರ ಸಂಖ್ಯೆಯನ್ನು ತಾತ್ಕಾಲಿಕವಾಗಿ ಕಡಿಮೆ ಮಾಡತಕ್ಕುದೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಬಹುದು.

**4. ನ್ಯಾಯಾಧಿಕರಣದ ಪ್ರಧಾನ ಸ್ಥಾನ.–** (1) ನ್ಯಾಯಾಧಿಕರಣದ ಪ್ರಧಾನ ಸ್ಥಾನವು ಬೆಂಗಳೂರಿನಲ್ಲಿರತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನ್ಯಾಯಾಧಿಕರಣದ ನ್ಯಾಯಪೀಠಗಳು, ಕಾಲಕಾಲಕ್ಕೆ ಹಾಗೂ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ರಾಜ್ಯ ಸರ್ಕಾರದ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳಗಳಲ್ಲಿ ಉಪವೇಶನಗಳನ್ನು ನಡೆಸಬಹುದು.

**5. ನ್ಯಾಯಾಧಿಕರಣದ ಅಧಿಕಾರಗಳು.–** (1) ನ್ಯಾಯಾಧಿಕರಣವು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ, ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957 ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಇವುಗಳ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಕರ್ನಾಟಕ ಮಾರಾಟಗಳ ತೆರಿಗೆ ಅಪೀಲು ನ್ಯಾಯಾಧಿಕರಣ, ಕರ್ನಾಟಕ ಸಹಕಾರ ಅಪೀಲು ನ್ಯಾಯಾಧಿಕರಣ ಮತ್ತು ಕರ್ನಾಟಕ ಕಂದಾಯ ಅಪೀಲು ನ್ಯಾಯಾಧಿಕರಣಗಳು ಹೊಂದಿದ್ದಂಥ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕುದು. ಸದರಿ ನ್ಯಾಯಾಧಿಕರಣಗಳಿಗೆ ಯಾವುದೇ ಕಾನೂನಿನಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಈ ಅಧಿನಿಯಮದ ಮೇರೆಗೆ ರಚಿತವಾದ ನ್ಯಾಯಾಧಿಕರಣಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

(2) ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸರ್ಕಾರಕ್ಕೆ ಅಥವಾ ಇತರೆ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ವಹಿಸಿಕೊಡಲಾದ ಯಾವುವೇ ಅಪೀಲು ಅಥವಾ ಪುನರೀಕ್ಷಣಾ ಅಧಿಕಾರಗಳು ಅಥವಾ ಪ್ರಕಾರ್ಯಗಳನ್ನು ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಬಹುದು ಅಥವಾ ವಹಿಸಿಕೊಡಬಹುದು ಮತ್ತು ನ್ಯಾಯಾಧಿಕರಣವು ಹಾಗೆ ಪ್ರದಾನ ಮಾಡಿದ ಅಥವಾ ವಹಿಸಿಕೊಟ್ಟ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕುದು.

**6. ನ್ಯಾಯಾಧಿಕರಣದ ವ್ಯವಹಾರ ನಡವಳಿಕೆ.–** (1) ಅಪೀಲುಗಳು, ಪುನರೀಕ್ಷಣೆ ಮತ್ತು ಇತರೆ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ನ್ಯಾಯಾಧಿಕರಣದ ಅಧಿಕಾರಗಳು, (2) ಮತ್ತು (3)ನೇ ಉಪ-ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಅಧ್ಯಕ್ಷನು ಇಬ್ಬರು ಸದಸ್ಯರ ನ್ಯಾಯಪೀಠವು ಚಲಾಯಿಸತಕ್ಕುದು. ಅವರಲ್ಲಿ ಒಬ್ಬನು ಜಿಲ್ಲಾ ನ್ಯಾಯಾಧೀಶನಾಗಿರತಕ್ಕುದು.

(2) ನ್ಯಾಯಾಧಿಕರಣದ ಒಬ್ಬ ಸದಸ್ಯನು, ಅಧ್ಯಕ್ಷನು ಈ ಬಗ್ಗೆ ಮಾಡಿದ ಯಾವುದೇ ವಿಶೇಷ ಅಥವಾ ಸಾಮಾನ್ಯ ಆದೇಶಗಳಿಗೊಳಪಟ್ಟು,-

(i) ಅಪೀಲು ಅಥವಾ ಪುನರೀಕ್ಷಣಾ ಅರ್ಜಿಯ ಅಂಗೀಕಾರ;

(ii) ಕಾನೂನಿನ ಮೂಲಕ ಅನುಮತಿಸಿದ ಅವಧಿಯು ಮುಕ್ತಾಯವಾದ ತರುವಾಯ ಸಲ್ಲಿಸಿದ ಅಪೀಲು ಅಥವಾ ಪುನರೀಕ್ಷಣಾ ಅರ್ಜಿಯ ಅಂಗೀಕಾರ;

(iii) ಅಪೀಲು, ಪುನರೀಕ್ಷಣೆ, ಅಭಿಪ್ರಾಯ ಕೋರಿಕೆ ಅಥವಾ ಇತರೆ ವ್ಯವಹರಣೆಗಳು ವಿಲೆಯಾಗುವವರೆಗೆ ತಡೆ ಆದೇಶಗಳು;

(iv) ಅಪೀಲುಗಳು, ಪುನರೀಕ್ಷಣೆಗಳು, ಅಭಿಪ್ರಾಯ ಕೋರಿಕೆಗಳು ಅಥವಾ ಇತರೆ ವ್ಯವಹರಣೆಗಳಲ್ಲಿ ಒಂದು ವಾದಕಾಲೀನ ಸ್ವರೂಪದ ಯಾವುದೇ ವಿಷಯ;

(v) ನಿಯಮಿಸಬಹುದಾದಂಥ ಇತರೆ ವಿಷಯಗಳು ಮತ್ತು ಅಂಥ ಷರತ್ತುಗಳಿಗೊಳಪಟ್ಟು ಇವುಗಳಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣದ ಅಧಿಕಾರಗಳನ್ನು ಚಲಾಯಿಸಬಹುದು.

(3) (ಎ) ಈ ಸಹಕಾರ ಇಲಾಖೆಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಸುನಾವಣೆ ಮಾಡುವ ನ್ಯಾಯಪೀಠವು,-

(i) ಒಬ್ಬ ಜಿಲ್ಲಾ ನ್ಯಾಯಾಧೀಶ; ಮತ್ತು

[1][(ii) ಒಬ್ಬ ಸಹಕಾರ ಸದಸ್ಯನನ್ನು][1] ಒಳಗೊಂಡಿರತಕ್ಕುದು;

1. 1979ರ ಅಧಿನಿಯಮ ಸಂಖ್ಯೆ 8ರ ಮೂಲಕ 22.02.1979ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ಸುನಾವಣೆ ಮಾಡುವ ನ್ಯಾಯಪೀಠವು,-

(i) ಒಬ್ಬ ಜಿಲ್ಲಾ ನ್ಯಾಯಾಧೀಶ; ಮತ್ತು

[1][(ii) ಒಬ್ಬ ವಾಣಿಜ್ಯ ತೆರಿಗೆಗಳ ಸದಸ್ಯನನ್ನು][1] ಒಳಗೊಂಡಿರತಕ್ಕುದು.

1. 1979ರ ಅಧಿನಿಯಮ ಸಂಖ್ಯೆ 8ರ ಮೂಲಕ 22.02.1974ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4) [ * * * * * ][1]

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(5) ಅಪೀಲು, ಪುನರೀಕ್ಷಣೆ, ಅಭಿಪ್ರಾಯ ಕೋರಿಕೆ ಅಥವಾ ಅರ್ಜಿಯನ್ನು ಒಂದು ನ್ಯಾಯಪೀಠವು ಸುನಾವಣೆ ಮಾಡುವಲ್ಲಿ ಆ ಅಪೀಲು, ಪುನರೀಕ್ಷಣೆ, ಅಭಿಪ್ರಾಯ ಕೋರಿಕೆ ಅಥವಾ ಅರ್ಜಿಯನ್ನು ಬಹುಮತ ಅಭಿಪ್ರಾಯಕ್ಕೆ ಅನುಸಾರವಾಗಿ ತೀರ್ಮಾನಿಸತಕ್ಕುದು:

[1][ಪರಂತು, ಅಪೀಲು ಅಥವಾ ಅರ್ಜಿಯನ್ನು ಸುನಾವಣೆ ಮಾಡುವ ನ್ಯಾಯಪೀಠವು ಇಬ್ಬರು ಸದಸ್ಯರನ್ನು ಒಳಗೊಂಡಿದ್ದರೆ ಮತ್ತು ಆ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾದರೆ 7ನೇ ಪ್ರಕರಣದ ಮೇರೆಗೆ ಒಂದು ಪೂರ್ಣ ನ್ಯಾಯಪೀಠವನ್ನು ರಚಿಸುವುದಕ್ಕಾಗಿ ಪ್ರಕರಣದ ಕಾಗದಪತ್ರಗಳನ್ನು ಅಧ್ಯಕ್ಷನ ಮುಂದೆ ಇಡತಕ್ಕುದು.][1]

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಪೂರ್ಣ ನ್ಯಾಯಪೀಠಕ್ಕೆ ಒಪ್ಪಿಸುವುದು.–** (1) 4ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಧ್ಯಕ್ಷನು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ಸದಸ್ಯರ ಪೂರ್ಣ ನ್ಯಾಯಪೀಠವನ್ನು ರಚಿಸಬಹುದು ಮತ್ತು 6ನೇ ಪ್ರಕರಣದ (1)ನೇ ಉಪ-ಪ್ರಕರಣ ಅಥವಾ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನ್ಯಾಯಪೀಠವು ಹಾಗೆ ಸೂಕ್ತವೆಂದು ಯೋಚಿಸಿದರೆ ಅದನ್ನು ರಚಿಸತಕ್ಕುದು.

(2) ಪೂರ್ಣ ನ್ಯಾಯಪೀಠದ ತೀರ್ಮಾನವು ಬಹುಮತ ಅಭಿಪ್ರಾಯಕ್ಕೆ ಅನುಸಾರವಾಗಿ ಇರತಕ್ಕುದು.

**8. ಪುನರವಲೋಕನದ ಅಧಿಕಾರ.–** (1) ನ್ಯಾಯಾಧಿಕರಣವು, ತಾನಾಗಿಯೇ ಅಥವಾ ಬಾಧಿತರಾದ ಯಾರೇ ಪಕ್ಷಕಾರನ ಅರ್ಜಿಯ ಮೇಲೆ ಅದು ಮಾಡಿದ ಯಾವುದೇ ಆದೇಶವನ್ನು ಪುನರವಲೋಕಿಸಬಹುದು ಮತ್ತು ಅದು ಅದಕ್ಕೆ ಸಂಬಂಧಿಸಿದಂತೆ ಅದು ಅವಶ್ಯವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಯಾವುದೇ ಅಂಥ ಅರ್ಜಿಯನ್ನು ಯುಕ್ತ ಶ್ರದ್ಧೆಯನ್ನು ವಹಿಸಿದ ತರುವಾಯ ಅಂಥ ಪಕ್ಷಕಾರನ ತಿಳಿವಳಿಕೆಗೆ ಬಾರದಿದ್ದಂಥ ಅಥವಾ ಆ ಕಾಲದಲ್ಲಿ ಅವನು ಹಾಜರ್ಪಡಿಸಲಾಗಿದ್ದಿದ್ದಂಥ ಹೊಸ ಮತ್ತು ವಿಷಯ ಅಥವಾ ಸಾಕ್ಷ್ಯವನ್ನು ಕಂಡುಹಿಡಿಯಲಾಗಿದೆಯೆಂದು ಅಥವಾ ದಾಖಲೆಯ ಮೇಲಿಂದಲೇ ಸ್ಪಷ್ಟವಾಗುವ ತಪ್ಪು ಅಥವಾ ಪ್ರಮಾದವು ಇದೆಯೆಂದು ಅಥವಾ ಯಾವುದೇ ಸಾಕಷ್ಟು ಕಾರಣವಿದೆಯೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದ ಹೊರತು ಪುರಸ್ಕರಿಸತಕ್ಕುದಲ್ಲ :

ಮತ್ತೂ ಪರಂತು,-

(i) ಬಾಧಿತರಾದ ಪಕ್ಷಕಾರರಿಗೆ ನೋಟೀಸನ್ನು ಕೊಡಲಾಗಿದ್ದ ಹೊರತು ಯಾವುದೇ ಆದೇಶವನ್ನು ವ್ಯತ್ಯಾಸಗೊಳಿಸತಕ್ಕುದಲ್ಲ ಅಥವಾ ವಿಪರ್ಯಯಗೊಳಿಸತಕ್ಕುದಲ್ಲ ; ಮತ್ತು

(ii) ಖಾಸಗೀ ವ್ಯಕ್ತಿಗಳ ನಡುವಣ ಹಕ್ಕಿನ ಯಾವುದೇ ಪ್ರಶ್ನೆಯನ್ನು ಬಾಧಕಗೊಳಿಸುವ ಯಾವುದೇ ಆದೇಶವನ್ನು ಬಾಧಿತನಾದ ಪಕ್ಷಕಾರನ ಅರ್ಜಿಯ ಮೇಲಲ್ಲದೆ ಪುನರವಲೋಕಿಸತಕ್ಕುದಲ್ಲ.

(2) ಆದೇಶದ ಪುನರವಲೋಕನಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಆದೇಶದ ದಿನಾಂಕದಿಂದ ತೊಂಭತ್ತು ದಿನಗಳ ಅವಧಿಯೊಳಗಾಗಿ ಮಾಡಿಕೊಳ್ಳತಕ್ಕುದು.

(3) ಕಾಲಪರಿಮಿತಿ ಅಧಿನಿಯಮ, 1963ರ 4, 5 ಮತ್ತು 12ನೇ ಪ್ರಕರಣಗಳ ಉಪಬಂಧಗಳು ಈ ಪ್ರಕರಣದ ಮೇರೆಗಿನ ಪುನರವಲೋಕನಕ್ಕಾಗಿನ ಅರ್ಜಿಗೆ ಅನ್ವಯವಾಗತಕ್ಕುದು.

[1][**8ಎ. ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.–** (1) ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957 (ಕರ್ನಾಟಕ ಅಧಿನಿಯಮ, 1957ರ ಸಂಖ್ಯೆ 25)ರ ಅಡಿಯಲ್ಲಿ ಉದ್ಭವಿಸುವ ಯಾವುದೇ ವಿಷಯದಲ್ಲಿನ ನ್ಯಾಯಾಧಿಕರಣದ ಆದೇಶದ ವಿರುದ್ಧ ಯಾರೇ ಪಕ್ಷಕಾರನು ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿವಸಗಳೊಳಗಾಗಿ ನ್ಯಾಯಾಧಿಕರಣವು ಕಾನೂನಿನ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸಲು ವಿಫಲವಾಗಿದೆಯೆಂದು ಅಥವಾ ತಪ್ಪಾಗಿ ತೀರ್ಮಾನಿಸಿದೆಯೆಂಬ ಕಾರಣದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ಸಾಕಷ್ಟು ಕಾರಣ ತೋರಿಸಿದ್ದಕ್ಕಾಗಿ ಉಚ್ಚ ನ್ಯಾಯಾಲಯವು ಅರವತ್ತು ದಿವಸಗಳ ಸದರಿ ಅವಧಿಯ ತರುವಾಯ ಅರ್ಜಿಯನ್ನು ಅಂಗೀಕರಿಸಬಹುದು.

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಸೇರಿಸಲಾಗಿದೆ.

(2) ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅಂಥ ರೀತಿಯಲ್ಲಿ ಅದನ್ನು ಸತ್ಯಾಪಿಸತಕ್ಕುದು ಮತ್ತು ಅದನ್ನು ರಾಜ್ಯ ಸರ್ಕಾರವು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ, ಯಾರೇ ಇತರ ವ್ಯಕ್ತಿಯು ಸಲ್ಲಿಸಿದರೆ ಅದರೊಂದಿಗೆ ಒಂದು ನೂರು ರೂಪಾಯಿಗಳ ಫೀಜು ಇರತಕ್ಕುದು.

(3) ಉಚ್ಚ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಸಾಕಷ್ಟು ಕಾರಣವಿಲ್ಲವೆಂದು ಪರಿಗಣಿಸಿದರೆ ಅದು ಮನವಿಯನ್ನು ಕ್ಷಿಪ್ರವಾಗಿ ವಜಾ ಮಾಡಬಹುದು:

ಪರಂತು, ಯಾವುದೇ ಅರ್ಜಿಯನ್ನು ಅರ್ಜಿದಾರನು ಅದಕ್ಕೆ ಸಮರ್ಥನೆಯಲ್ಲಿ ಅಹವಾಲನ್ನು ಕೇಳಿಕೊಳ್ಳಲು ಅದರ ಯುಕ್ತ ಅವಕಾಶ ಹೊಂದಿದ್ದ ಹೊರತು ಹಾಗೆ ವಜಾ ಮಾಡತಕ್ಕುದಲ್ಲ.

(4) (ಎ) ಉಚ್ಚ ನ್ಯಾಯಾಲಯವು ಅರ್ಜಿಯನ್ನು ಕ್ಷಿಪ್ರವಾಗಿ ವಜಾ ಮಾಡದಿದ್ದರೆ ಅದು ಅರ್ಜಿಯಲ್ಲಿನ ಎರಡು ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ನಂತರ ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳನ್ನು ನಿರ್ಧರಿಸತಕ್ಕುದು ಮತ್ತು ಯಾವ ಆದೇಶದ ವಿರುದ್ಧ ಅರ್ಜಿಯನ್ನು ಸಲ್ಲಿಸಲಾಯಿತೋ ಆ ಆದೇಶವನ್ನು ವಿಪರ್ಯಯ, ಸ್ಥಿರೀಕರಣ ಅಥವಾ ತಿದ್ದುಪಡಿ ಮಾಡತಕ್ಕುದು ಅಥವಾ ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳ ಮೇಲೆ ಉಚ್ಚ ನ್ಯಾಯಾಲಯದ ಅಭಿಪ್ರಾಯದೊಂದಿಗೆ ವಿಷಯವನ್ನು ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕುದು ಅಥವಾ ಆ ವಿಷಯಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯವು ಸೂಕ್ತವೆಂದು ಯೋಚಿಸುವಂಥ ಇತರ ಆದೇಶವನ್ನು ಮಾಡತಕ್ಕುದು.

(ಬಿ) ಉಚ್ಚ ನ್ಯಾಯಾಲಯವು ಎತ್ತಲಾದ ಕಾನೂನಿನ ಪ್ರಶ್ನೆಗಳ ಮೇಲೆ ತನ್ನ ಅಭಿಪ್ರಾಯದೊಂದಿಗೆ (ಎ) ಖಂಡದ ಮೇರೆಗೆ ವಿಷಯವನ್ನು ನ್ಯಾಯಾಧಿಕರಣಕ್ಕೆ ಕಳುಹಿಸಿರುವಲ್ಲಿ ನ್ಯಾಯಾಧಿಕರಣವು ಅದು ಮಾಡಿದ ಆದೇಶವನ್ನು ಅಂಥ ಅಭಿಪ್ರಾಯಕ್ಕೆ ಅನುಸಾರವಾಗಿ ತಿದ್ದುಪಡಿ ಮಾಡತಕ್ಕುದು.

(5) (4)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂಚೆ, ಉಚ್ಚ ನ್ಯಾಯಾಲಯವು ಮನವಿಯನ್ನು ಹಾಗೆ ಮಾಡುವುದು ಅವಶ್ಯಕವೆಂದು ಅದು ಪರ್ಯಾಲೋಚಿಸಿದರೆ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಕಳುಹಿಸಬಹುದು ಮತ್ತು ಯಾವುದೇ ನಿರ್ದಿಷ್ಟ ಪ್ರಶ್ನೆ ಅಥವಾ ವಿವಾದಾಂಶದ ಮೇಲೆ ಅದರ ನಿರ್ಣಯಗಳೊಂದಿಗೆ ವಾಪಸು ಮಾಡಲು ಅದಕ್ಕೆ ನಿರ್ದೇಶಿಸಬಹುದು.

(6) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದರೂ, ಪ್ರಕರಣದಲ್ಲಿ ಮಾಡಲಾದ ನಿರ್ಧರಣೆಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡತಕ್ಕುದು :

ಪರಂತು, ಅರ್ಜಿಯ ಪರಿಣಾಮದಿಂದಾಗಿ ಅಂಥ ನಿರ್ಧರಣೆಯಲ್ಲಿ ಯಾವುದೇ ಬದಲಾವಣೆ ಅವಶ್ಯವಾದರೆ ಉಚ್ಚ ನ್ಯಾಯಾಲಯವು ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡಲು ಅಧಿಕೃತಗೊಳಿಸಬಹುದು ಮತ್ತು ಸದರಿ ಪ್ರಾಧಿಕಾರಿಯು ತದನುಸಾರವಾಗಿ ನಿರ್ಧರಣೆಯನ್ನು ತಿದ್ದುಪಡಿ ಮಾಡತಕ್ಕುದು. ಆ ತರುವಾಯ ತೆರಿಗೆದಾರನು ಹೆಚ್ಚಾಗಿ ಸಂದಾಯ ಮಾಡಿದ ಮೊಬಲಗನ್ನು ಬಡ್ಡಿಯಿಲ್ಲದೆ ಅವನಿಗೆ ಮರುಪಾವತಿ ಮಾಡತಕ್ಕುದು ಅಥವಾ ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರ ಉಪಬಂಧಗಳಿಗನುಸಾರ ಅವನಿಂದ ಬರಬೇಕಾದ ತೆರಿಗೆಯ ಹೆಚ್ಚಿನ ಮೊಬಲಗನ್ನು ಸಂಗ್ರಹಿಸತಕ್ಕುದು.

(7) (ಎ) ಉಚ್ಚ ನಾಯಾಲಯವು ಅರ್ಜಿಯಲ್ಲಿನ ಯಾರೇ ಪಕ್ಷಕಾರನ ಅರ್ಜಿ ಮೇಲೆ ಆ ಆದೇಶವನ್ನು ಅದು ಮಾಡಿದಾಗ ಅದರ ಮುಂದೆ ಇರದೆ ಇದ್ದಂಥ ಸಂಗತಿಗಳ ಆಧಾರದ ಮೇಲೆ (4)ನೇ ಉಪ-ಪ್ರಕರಣದ ಮೇರೆಗೆ ಅದು ಮಾಡಿದ ಆದೇಶವನ್ನು ಪುನರವಲೋಕಿಸತಕ್ಕುದು.

(ಬಿ) ಪುನರವಲೋಕನಕ್ಕಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸತಕ್ಕುದು ಮತ್ತು ರಾಜ್ಯಸರ್ಕಾರವು ಶಕ್ತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ

ಇತರ ಯಾರೇ ವ್ಯಕ್ತಿಯು ಅದನ್ನು ಸಲ್ಲಿಸಿರುವಲ್ಲಿ ಅದರೊಂದಿಗೆ ಒಂದು ನೂರು ರೂಪಾಯಿಗಳ ಫೀಜು ಇರತಕ್ಕುದು.

(8) ದಾಖಲೆಯಿಂದ ಸ್ಪಷ್ಟವಾಗುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ಉಚ್ಚ ನ್ಯಾಯಾಲಯವು (4)ನೇ ಉಪಪ್ರಕರಣದ ಮೇರೆಗೆ ಅದು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು, ಆ ಆದೇಶದಿಂದ ಬಾಧಿತರಾದ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡದೆಯೇ ಮಾಡತಕ್ಕುದಲ್ಲ.

(9) (1) ಅಥವಾ (7)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಗೆ ಸಂಬಂಧಪಟ್ಟಂತೆ ಖರ್ಚುಗಳು, ಉಚ್ಚ ನ್ಯಾಯಾಲಯದ ವಿವೇಚನೆಯಲ್ಲಿ ಇರತಕ್ಕುದು.

**9. ನ್ಯಾಯಾಧಿಕರಣದ ಆದೇಶಗಳ ಅಂತಿಮತೆ.–** ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆದರೆ [1][8 ಮತ್ತು 8ಎ ಪ್ರಕರಣಗಳ][1] ಉಪಬಂಧಗಳಿಗೊಳಪಟ್ಟು ನ್ಯಾಯಾಧಿಕರಣದ ಪ್ರತಿಯೊಂದು ತೀರ್ಮಾನವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಪ್ರತಿಯೋಜಿಸಲಾಗಿದೆ.

**10. ವಿವರಪಟ್ಟಿಕೆಗಳನ್ನು ತರಿಸಿಕೊಳ್ಳಲು ನ್ಯಾಯಾಧಿಕರಣದ ಅಧಿಕಾರಗಳು, ಇತ್ಯಾದಿ.–** ನ್ಯಾಯಾಧಿಕರಣವು ಅದರ ಅಪೀಲು ಅಥವಾ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಎಲ್ಲಾ ಅಥವಾ ಯಾವುದನ್ನಾದರೂ ಮಾಡಬಹುದು; ಎಂದರೆ:–

(ಎ) ಅದರ ಅಧಿಕಾರ ವ್ಯಾಪ್ತಿಗೊಳಪಟ್ಟಿರುವ ಪ್ರಾಧಿಕಾರಗಳಿಂದ ವಿವರಪಟ್ಟಿಕೆಗಳನ್ನು ಕೊಳ್ಳುವುದು;

(ಬಿ) ಅಂಥ ಪ್ರಾಧಿಕಾರಿಗಳ ಆಚರಣೆ ಮತ್ತು ವ್ಯವಹರಣೆಗಳನ್ನು ವಿನಿಯಮಿಸುವುದಕ್ಕಾಗಿ ಸಾಮಾನ್ಯ ನಿರ್ದೇಶನಗಳನ್ನು ಕೊಡುವುದು ಮತ್ತು ನಮೂನೆಗಳನ್ನು ನಿಯಮಿಸುವುದು:

ಪರಂತು, ಅಂಥ ನಿರ್ದೇಶನಗಳು ಮತ್ತು ನಮೂನೆಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅಸಂಗತವಾಗಿರತಕ್ಕುದಲ್ಲ.

**11. ನ್ಯಾಯಾಧಿಕರಣದ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕುದು.–** ನ್ಯಾಯಾಧಿಕರಣದ ಮುಂದೆ ಇರುವ ಯಾವುವೇ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಮತ್ತು ಅದರ 196ನೇ ಪ್ರಕರಣದ ಉದ್ದೇಶಕ್ಕಾಗಿ ನ್ಯಾಯಿಕ ವ್ಯವಹರಣೆಗಳೆಂಬುದಾಗಿ ಭಾವಿಸತಕ್ಕುದು ಮತ್ತು ಆ ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (ಕೇಂದ್ರ ಅಧಿನಿಯಮ 1974ರ 2)ರ195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಕ್ಕಾಗಿ ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕುದು.

[1][**11ಎ. ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕುದು.–** ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಉದ್ದೇಶಕ್ಕಾಗಿ ನ್ಯಾಯಾಧಿಕರಣವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಕೇಂದ್ರ ಅಧಿನಿಯಮ 1908ರ 5) ಮೇರೆಗೆ ದಾವೆಯನ್ನು ಅಧಿವಿಚಾರಿಸುವಾಗ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕುದು ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು, ಅವನ ಹಾಜರಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ಸಾಕ್ಷ್ಯವಾಗಿ ಹಾಜರುಪಡಿಸಬಹುದಾದಂಥ ಯಾವುದೇ ದಸ್ತಾವೇಜು ಅಥವಾ ಇತರ ಯಾವುದೇ ವಸ್ತುವನ್ನು ಕಂಡುಹಿಡಿಯುವುದು ಮತ್ತು ಹಾಜರ್ಪಡಿಸುವುದನ್ನು ಅಗತ್ಯ ಪಡಿಸುವುದು;

(ಸಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಡಿ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನ್ನುಗಳನ್ನು ಹೊರಡಿಸುವುದು;

(ಇ) ನಿಯಮಿಸಬಹುದಾದಂಥ ಇತರೆ ವಿಷಯಗಳು.][1]

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಸೇರಿಸಲಾಗಿದೆ.

**12. ರಾಜ್ಯಪ್ರತಿನಿಧಿ.–** (1) ರಾಜ್ಯಸರ್ಕಾರವು ನ್ಯಾಯಾಧಿಕರಣದ ಮುಂದೆ ಅದರ ಪ್ರತಿನಿಧಿಯಾಗಿ ಅದು ನಿರ್ದಿಷ್ಟಪಡಿಸಬಹುದಾದಂಥ ಪದನಾಮ ಹೊಂದಿದ ಒಬ್ಬರು ಅಥವಾ ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡತಕ್ಕುದು.

(2) ಅಂಥ ಅಧಿಕಾರಿ ಅಥವಾ ಅಧಿಕಾರಿಗಳು ರಾಜ್ಯಸರ್ಕಾರದ ಪರವಾಗಿ ನ್ಯಾಯಾಧಿಕರಣವು ಕೊಟ್ಟ ನೋಟೀಸುಗಳನ್ನು ಸ್ವೀಕರಿಸತಕ್ಕುದು ಮತ್ತು ಅವನು/ಅವರು ನ್ಯಾಯಾಧಿಕರಣದ ಮುಂದೆ ಅಂಥ ವ್ಯವಹರಣೆಗಳಲ್ಲಿ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಹಾಜರಾಗಲು, ಪ್ರತಿನಿಧಿಸಲು, ಕಾರ್ಯನಿರ್ವಹಿಸಲು ಮತ್ತು ವಾದಿಸಲು ಹಕ್ಕನ್ನು ಹೊಂದಿರತಕ್ಕುದು. ಅವರು ರಾಜ್ಯಸರ್ಕಾರವು ನಿರ್ದೇಶಿಸಬಹುದಾದಂಥ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕುದು ಮತ್ತು ನಿರ್ದೇಶಿಸಬಹುದಾದಂಥ ಅಧಿಕಾರಿಗಳಿಗೆ ಅಧೀನರಾಗಿರತಕ್ಕುದು.

**13. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

**14. ನಿಯಮ ರಚಿಸುವ ಅಧಿಕಾರ.–** (1) ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶವನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು,-

(ಎ) ಯಾವ ಇತರ ವಿಷಯಗಳು ಮತ್ತು ಷರತ್ತುಗಳಿಗೊಳಪಟ್ಟು ಒಬ್ಬ ಸದಸ್ಯನು ನ್ಯಾಯಾಧಿಕರಣದ ಅಧಿಕಾರಗಳನ್ನು ಚಲಾಯಿಸಬಹುದೋ ಆ ಇತರ ವಿಷಯಗಳನ್ನು ಮತ್ತು ಷರತ್ತುಗಳನ್ನು ನಿಯಮಿಸುವುದು.

[1][(ಬಿ) [ * * * ][1]

1. 1976ರ ಅಧಿನಿಯಮ ಸಂಖ್ಯೆ 59ರ ಮೂಲಕ 31.07.1976ರಿಂದ ಜಾರಿಗೆ ಬರುಂವತೆ ಬಿಟ್ಟುಬಿಡಲಾಗಿದೆ.

(ಸಿ) ಯಾವ ಷರತ್ತುಗಳಿಗೊಳಪಟ್ಟು ನ್ಯಾಯಾಧಿಕರಣದ ನ್ಯಾಯಪೀಠಗಳು ಅದರ ಪ್ರಧಾನಸ್ಥಾನವನ್ನು ಹೊರತುಪಡಿಸಿ ಇತರ ಸ್ಥಳಗಳಲ್ಲಿ ಉಪವೇಶನಗಳನ್ನು ನಡೆಸಬಹುದೋ ಆ ಷರತ್ತುಗಳನ್ನು ನಿಯಮಿಸುವುದು

– ಇವುಗಳಿಗಾಗಿ ರಚಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು, ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಬರುವ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮಗಳು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ ಆದಾಗ್ಯೂ, ಇಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವುಂಟುಮಾಡತಕ್ಕುದಲ್ಲ.

**15. ವಿನಿಯಮಗಳನ್ನು ರಚಿಸುವ ಅಧಿಕಾರ.–** ನ್ಯಾಯಾಧಿಕರಣವು ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಧಿಸೂಚನೆಯ ಮೂಲಕವಾಗಿ ನ್ಯಾಯಾಧಿಕರಣದ ಆಚರಣೆ ಮತ್ತು ಪ್ರಕ್ರಿಯೆಗಳನ್ನು ಮತ್ತು ಅದರ ವ್ಯವಹಾರದ ವಿಲೆಯನ್ನು ಮತ್ತು ಸಂಬಂಧಪಟ್ಟ ಅಧಿನಿಯಮಿತಿಯಲ್ಲಿ ಯಾವುದೇ ಸ್ಪಷ್ಟ ಉಪಬಂಧವಿಲ್ಲದಿರುವಲ್ಲಿ ಯಾವ ಕಾಲದೊಳಗೆ ಅಪೀಲುಗಳು ಅಥವಾ ಅರ್ಜಿಗಳನ್ನು ನ್ಯಾಯಾಧಿಕರಣದಲ್ಲಿ ದಾಖಲ್ಮಾಡಬಹುದೋ ಆ ಕಾಲ ಮತ್ತು ನ್ಯಾಯಾಧಿಕರಣದ ಮುಂದಿರುವ ಯಾವುದೇ ವ್ಯವಹರಣೆಗಳ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾವುವೇ ಖರ್ಚುಗಳ ಬಗ್ಗೆ ವಿನಿಯಮಗಳನ್ನು ಒಳಗೊಂಡು ಸಾಮಾನ್ಯವಾಗಿ ವಿನಿಯಮಿಸುವುದ್ಕಾಗಿ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸಂಗತವಾದ ವಿನಿಯಮಗಳನ್ನು ರಚಿಸತಕ್ಕುದು.

**16. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ.–** ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಕರ್ನಾಟಕ ಸಹಕಾರಿ ಅಪೀಲು ನ್ಯಾಯಾಧಿಕರಣ, ಕರ್ನಾಟಕ ಮಾರಾಟಗಳ ತೆರಿಗೆ ಅಪೀಲು ನ್ಯಾಯಾಧಿಕರಣ ಮತ್ತು ಕರ್ನಾಟಕ ಭೂ ಕಂದಾಯ ಅಪೀಲು ನ್ಯಾಯಾಧಿಕರಣಗಳು ಕೆಲಸ ಮಾಡುವುದು ನಿಂತುಹೋಗತಕ್ಕುದು ಮತ್ತು ಸದರಿ ನ್ಯಾಯಾಧಿಕರಣಗಳ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳು ಆ ದಿವಸದಂದು ಈ ಅಧಿನಿಯಮದ ಮೇರೆಗೆ ರಚಿಸಿದ ನ್ಯಾಯಾಧಿಕರಣಕ್ಕೆ ವರ್ಗಾಯಿತವಾಗತಕ್ಕುದು ಮತ್ತು ಆ ತರುವಾಯ ಈ ಅಧಿನಿಯಮದ ಉಪಬಂಧಗಳು ಅಂಥ ವ್ಯವಹರಣೆಗಳನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ನ್ಯಾಯಾಧಿಕರಣದ ಮುಂದೆ ಪ್ರಾರಂಭಿಸಲಾಗಿದ್ದಿದ್ದರೆ ಹೇಗೋ ಹಾಗೆ ಅಂಥ ವ್ಯವಹರಣೆಗಳಿಗೆ ಅನ್ವಯವಾಗತಕ್ಕುದು.

**17. 1975ರ ಕರ್ನಾಟಕ ಅಧ್ಯಾದೇಶ ಸಂ. 22 ಮತ್ತು 27 ಇವುಗಳ ನಿರಸನ.–** (1) ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧ್ಯಾದೇಶ, 1975 (ಕರ್ನಾಟಕ ಅಧ್ಯಾದೇಶ 1975ರ ಸಂ.22) ಮತ್ತು ಕರ್ನಾಟಕ ಅಪೀಲು ನ್ಯಾಯಾಧಿಕರಣ (ತಿದ್ದುಪಡಿ) ಅಧ್ಯಾದೇಶ, 1975 (ಕರ್ನಾಟಕ ಅಧ್ಯಾದೇಶ 1975ರ ಸಂ. 27) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ಯಾಗ್ಯೂ, ಸದರಿ ಅಧ್ಯಾದೇಶಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕುದ್ದು.

* * * *

The above translation of the Karnataka Appelate Tribunal Act, 1976 (Karnataka Act No 10 of 1976) shall be the authoritative text in Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಜಿ. ದಕ್ಷಿಣಾಮೂರ್ತಿ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.